**OFFICE OF THE REGISTRAR GENERAL, HIGH COURT OF KARNATAKA**

**HIGH COURT BUILDINGS, BENGALURU 560001.**

**NOTIFICATION NO: HCE 29/2009 DATED 15.04.2017**

**RECRUITMENT OF CANDIDATES FOR THE POST OF SECOND DIVISION ASSISTANT**

**LAST DATE FOR SUBMISSION OF APPLICATION THROUGH ONLINE: 15.05.2017**

Online applications in the prescribed format are invited from applicants who are qualified as on the last date fixed for submission of applications for recruitment to **30 Posts** of Second Division Assistants on the establishment of the High Court of Karnataka, Bengaluru, through online link on http://karnatakajudiciary.kar.nic.in/recruitment.asp

**1. Method of Recruitment:** Selection of candidates will be made in accordance with The High Court of Karnataka Service (Conditions of Service and Recruitment) Rules, 1973, **as amended from time to time** and The High Court of Karnataka Service (Direct Recruitment by Selection) Rules, 1984, **as amended from time to time.**

**2. Minimum Qualification:**

1) Minimum qualification shall be degree in Science/ Arts / Commerce / Business Management /Computer Applications of a recognized University with minimum of 55% marks in the aggregate for candidates belonging to General Category and other backward categories and a minimum of 50% marks in the aggregate for candidates belonging to Schedule Caste and Schedule Tribes, with knowledge of operation of computer.

**Note: - Knowledge of operation of computers means possessing a certificate in computer basics issued by an institute imparting Computer education**.

**Contd...**

**3. Scale of Pay:** Rs.11600 – 200 – 12000 – 250 – 13000 – 300 – 14200 – 350 – 15600 – 400 – 17200 – 450 – 19000 – 500 – 21000.

**4. Probation:** The applicant if appointed shall be initially on probation for a period of two years or for extended period if necessary.

**5. Classification of Vacancies:**

**26 POSTS UNDER RESIDUAL PARENT CADRE ( INCLUDING 1 BACKLOG POST)**

| | Women Candidates | Rural Candidates | Physically Handicapped | Ex-servicemen | Kannada Medium | Displaced by Project | Unreserved | Total |
|---|---|---|---|---|---|---|---|---|
| **Scheduled Caste** | 1 | - | - | 1 | - | 1 | 1 | 4 |
| **Scheduled Tribe** | 1* | - | - | - | - | - | - | 1 |
| **Category I** | - | 1 | - | - | - | - | - | 1 |
| **Category-II (A)** | 1 | - | - | 1 | - | 1 | 1 | 4 |
| **Category-II (B)** | - | 1 | - | - | - | - | - | 1 |
| **Category-III (A)** | 1 | 1 | - | - | - | - | - | 2 |
| **Category-III (B)** | - | - | - | - | - | - | 1 | 1 |
| **General Merit** | 5 | 3 | - | 1 | 1 | 1 | 1 | 12 |
| **Total** | **9** | **6** | **-** | **3** | **1** | **3** | **4** | **26** |

*** Indicates Backlog posts.**

**Contd...**

**4 POSTS UNDER LOCAL CADRE (i.e., RESERVATION FOR HYDERABAD KARNATAKA REGION CANDIDATES UNDER ARTICLE 371(J) OF THE CONSTITUTION) (INCLUDING 1 BACK LOG POST)**

| | Women Candidates | Rural Candidates | Physically Handicapped | Ex-servicemen | Kannada Medium | Displaced by Project | Unreserved | Total |
|---|---|---|---|---|---|---|---|---|
| **Scheduled Tribe** | - | - | - | - | - | - | 1* | 1 |
| **Category IIB** | - | - | - | - | - | - | 1 | 1 |
| **General Merit** | 1 | 1 | - | - | - | - | - | 2 |
| **Total** | **1** | **1** | **-** | **-** | **-** | **-** | **2** | **4** |

* **Indicates Backlog posts**

**6. Mode of Selection:** Selection to the post of Second Division Assistant will be made on the basis of performance in the following Tests:

| Sl.No. | Particulars | Maximum Marks | Minimum Marks for passing the test |
|---|---|---|---|
| 1. | English Essay | 30 | 20 |
| 2. | Translation from Kannada to English | 30 | 20 |
| 3. | Test of General Knowledge | 20 | 10 |
| 4. | Viva – voce | 20 | 10 |
| **Grand Total** | | **100 Marks** | **60 Marks** |

**Note:** As per Rule 5 of High Court of Karnataka of Service (Direct Recruitment By Selection) Rules, 1984 such number of candidates as equal to five times the number of vacancies notified, selected in the order of merit, shall be called for the Written Test.

**Contd..**

**7. Age limit:** The age limit is, minimum of 18 years for all categories and the maximum age limit is as under:-

(a) 40 years in the case of a person belonging to Scheduled Caste or Scheduled Tribe or Category-I of other Backward Classes.

(b) 38 years in the case of a person belonging of Category II-A or II-B or III-A or III–B of other Backward Classes; and

(c) 35 years for others.

(d) Not withstanding anything contained in Rule 6 of the Karnataka Civil Services (General Recruitment) Rules, 1977,

i. In case of an applicant who is working or holding a post under the Government or a local authority or a Corporation established by a State Act or Central Act or established by the Government under a State Act or Central Act and owned or controlled by the Government by the number of years during which he/she is or was holding such post or ten years whichever is less;

ii. In case of candidate who is an ex-serviceman - by three years plus the number of years of service rendered by him in the Armed Forces of the Union;

iii. In case of a candidate who is physically handicapped - by ten years;

iv. In the case of a candidate who is widow - by ten years;

(e) The minimum and maximum age limit will be as on the **last date fixed for applying online i.e, 15.05.2017.**

**8. Method of Application and fee:** The method of Application shall be through **online** on the website http://karnatakajudicary.kar.nic.in/recruitment.asp to be applied as per the instructions made available in the Annexure on the website. **Applications sent by any other mode other than online will not be considered.**

**Contd..**

(a) The candidates belonging to General Merit and other Backward classes other than SC/ST/Category I and Physically Handicapped candidates, shall pay an Application Fee of **₹ 250/- (Rupees Two Hundred Fifty Only)** for and candidates belonging to Scheduled Caste/ Scheduled Tribe/ Category–I/ Physically Handicapped, shall pay an Application Fee of **₹ 100/- (Rupees One Hundred Only)** prescribed for the post, by any of the following mode of payment.

(i) **Online Payment:** On submission of online application the candidates shall make the online payment of application fee by SBI online payment gateway mentioned in the online application.

**Or**

(ii) **Challan Form:** On submission of online application the candidates shall download the challan through the SBI online payment gateway link mentioned in the online application in PDF format and shall remit the prescribed fee in any branch of SBI. (System need to support PDF reader-like Adobe, Acrobat)

(b) Fee once paid will not be refunded under any circumstances

**9. Last date for submission of application:-**

To register / submit online applications: **15.05.2017**

For payment of fee through Challan: **19.05.2017 (within Bank's working hours)**

**10. Candidates Claiming Reservations:**

a) Under SC/ ST, Category – I / II A / II B / III A / III B shall possess the certificate in the form as prescribed by the Government of Karnataka, and issued by the competent Authority.

b) Claiming reservation under Rural / Physically Handicapped / Ex – Servicemen / Kannada Medium / Displaced for projects/Widow candidates shall posses the Certificates issued by Competent Authorities.

**Contd..**

(c) The candidates claiming benefits under Sl. No. 10 (a) and (b) above shall possess the relevant certificates, issued by the Competent Authorities on or before the last date of applying on line.

(d) Candidates who are in service of Union of India / State Governments and their undertaking should possess the **"No Objection Certificate"** issued by the concerned Authority at the time of verification of documents/further tests.

(e) Candidates claiming reservation under Local Cadre shall possess the relevant certificate issued by the Competent Authority on or before the last day of applying online as prescribed under The Karnataka Public Employment (Reservation in appointment for Hyderabad-Karnataka Region) (Issue of Eligibility Certificates) Rules, 2013.

**11.** Candidates called for the Document Verification/ Written Test shall furnish the necessary original documents with regard to Educational Qualification, Caste, Date of Birth, reservations claimed with regard to Rural / Physically Handicapped / Ex – Servicemen / Kannada Medium / Displaced for projects/Widow and reservation claimed for Local Cadre for verification. On verification, **if the information so furnished by the applicant in the application is found to be false, then their candidature is liable for rejection and also they are liable for criminal prosecution for furnishing false information.**

**12.** The candidates shall furnish 3 character certificates (one from the last studied education Institution and 2 from the respectable persons) at the time of document verification

**13**. Candidates called for Written Tests/Viva-voce will have to appear for the same at their own cost.

**14.** The recruitment to the post of Second Division Assistant is made for posting either at High Court of Karnataka Principal Bench at Bengaluru or Benches at Dharwad and Kalaburagi.

**Contd..**

**15.** If any applicant is found to attempt / obtain extraneous support by any means for candidature from any officials or non-officials, he/she will not be eligible for appointment.

**BY ORDER OF HON'BLE THE CHIEF JUSTICE,**

**Sd/.**
**(B. JAYANTHA KUMAR),**
**REGISTRAR (RECRUITMENT)**

## ಮಹಾವಿಲೇಖನಾಧಿಕಾರಿಯವರ ಕಛೇರಿ, ಕರ್ನಾಟಕ ಉಚ್ಚ ನ್ಯಾಯಾಲಯ,

## ಅಂಬೇಡ್ಕರ್ ವೀದಿ, ಬೆಂಗಳೂರು–560 001

## ಅಧಿಸೂಚನೆ ಸಂಖ್ಯೆ ಹೆಚ್.ಸಿ.ಇ. 29/2009 ದಿನಾಂಕ 15.04.2017

## ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇಮಕಾತಿ

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15.05.2017**

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ, 30 ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗಳಿಗೆ ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೂ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್ **http://karnatakajudiciary.kar.nic.in/recruitment.asp** ಮೂಲಕ ಸಲ್ಲಿಸಬಹುದು.

1. ನೇಮಕಾತಿಯ ವಿಧಾನ:

   ಅಭ್ಯರ್ಥಿಗಳ ಆಯ್ಕೆಯನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದಂಥ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಸೇವಾ ಮತ್ತು ನೇಮಕಾತಿ ಷರತ್ತುಗಳು) ನಿಯಮಗಳು, 1973 ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದಂಥ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಆಯ್ಕೆಯ ಮೂಲಕ ನೇರ ನೇಮಕಾತಿ) ನಿಯಮಗಳು, 1984 ಇವುಗಳ ಅನುಸಾರವಾಗಿ ಮಾಡಲಾಗುವುದು.

2. ಕನಿಷ್ಠ ವಿದ್ಯಾರ್ಹತೆ:

   1) ಅಭ್ಯರ್ಥಿಗಳು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ವಿಜ್ಞಾನ/ಕಲೆ/ವಾಣಿಜ್ಯ/ ವ್ಯವಹಾರ ನಿರ್ವಹಣೆ **(Business Management)**/ ಕಂಪ್ಯೂಟರ್ ಅಪ್ಲಿಕೇಷನ್ಸ್ ವಿಷಯಗಳ ಪದವಿಯಲ್ಲಿ, ಸಾಮಾನ್ಯ ವರ್ಗ ಮತ್ತು ಇತರೆ ಹಿಂದುಳಿದ ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳು ಕನಿಷ್ಟ ಶೇಕಡ 55 ರಷ್ಟು ಅಂಕಗಳನ್ನು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯಥಿಗಳು ಕನಿಷ್ಠ ಶೇಕಡ 50ರಷ್ಟು ಅಂಕಗಳೊಂದಿಗಿನ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು ಮತ್ತು ಕಂಪ್ಯೂಟರ್ ನಿರ್ವಹಣಾ ಜ್ಞಾನ ಹೊಂದಿರತಕ್ಕದ್ದು.

   ಟಿಪ್ಪಣಿ: ಕಂಪ್ಯೂಟರ್ ನಿರ್ವಹಣಾ ಜ್ಞಾನ ಎಂದರೆ ಕಂಪ್ಯೂಟರ್ ಶಿಕ್ಷಣ ನೀಡುವ ಸಂಸ್ಥೆಯು ಪ್ರಧಾನ ಮಾಡುವ ಕಂಪ್ಯೂಟರ್ ಬೇಸಿಕ್ಸ್ ಕೋರ್ಸಿನ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

ಮುಂದುವರಿದಿದೆ..

3. ವೇತನ ಶ್ರೇಣಿ: ರೂ. 11600 – 200 –12000–250 –13000–300–14200–350–15600–400–17200–450–19000–500–21000

4. ಸೇವೆಯ ಪರಿವೀಕ್ಷಣಾ ಅವಧಿ : ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

5. ಖಾಲಿ ಹುದ್ದೆಗಳ ವರ್ಗೀಕರಣ :

ಉಳಿದ ಮೂಲವೃಂದದ 26 ಹುದ್ದೆಗಳು(1 ಬ್ಯಾಕ್‌ಲಾಗ್ ಹುದ್ದೆಯನ್ನೊಳಗೊಂಡು)

| ಪ್ರವರ್ಗ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲರು | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಸಾಮಾನ್ಯ | ಒಟ್ಟು |
|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | – | – | 1 | – | 1 | 1 | 4 |
| ಪರಿಶಿಷ್ಟ ಪಂಗಡ | 1* | – | – | – | – | – | – | 1 |
| ಪ್ರವರ್ಗ–I | – | 1 | – | – | – | – | – | 1 |
| ಪ್ರವರ್ಗ – II(ಎ) | 1 | – | – | 1 | – | 1 | 1 | 4 |
| ಪ್ರವರ್ಗ – II(ಬಿ) | – | 1 | – | – | – | – | – | 1 |
| ಪ್ರವರ್ಗ – III(ಎ) | 1 | 1 | – | – | – | – | – | 2 |
| ಪ್ರವರ್ಗ – III(ಬಿ) | – | – | – | – | – | – | 1 | 1 |
| ಸಾಮಾನ್ಯ | 5 | 3 | – | 1 | 1 | 1 | 1 | 12 |
| ಒಟ್ಟು | 9 | 6 | – | 3 | 1 | 3 | 4 | 26 |

* ಚಿಹ್ನೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸುತ್ತದೆ.

ಮುಂದುವರೆದಿದೆ..

**ಸ್ಥಳೀಯ ವೃಂದಗಳ 4 ಹುದ್ದೆಗಳು (ಅಂದರೆ ಸಂವಿಧಾನದ 371–(ಜೆ) ಅನುಚ್ಛೇದದಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಾತಿ) (1 ಬ್ಯಾಕ್‌ಲಾಗ್ ಹುದ್ದೆಗಳನ್ನೊಳಗೊಂಡು)**

| ಪ್ರವರ್ಗ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಅಂಗವಿಕಲರು | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಸಾಮಾನ್ಯ | ಒಟ್ಟು |
|---|---|---|---|---|---|---|---|---|
| ಪರಿಶಿಷ್ಟ ಪಂಗಡ | – | – | – | – | – | – | 1* | 1 |
| ಪ್ರವರ್ಗ – II(ಬಿ) | – | – | – | – | – | – | 1 | 1 |
| ಸಾಮಾನ್ಯ | 1 | 1 | – | – | – | – | – | 2 |
| ಒಟ್ಟು | 1 | 1 | – | – | – | – | 2 | 4 |

* ಚಿಹ್ನೆ ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸುತ್ತದೆ.

6. ಆಯ್ಕೆ ವಿಧಾನ: ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಯ ಆಯ್ಕೆಯನ್ನು ಈ ಮುಂದಿನ ಪರೀಕ್ಷೆಗಳಲ್ಲಿ ಅಭ್ಯರ್ಥಿಗಳು ತೋರಿಸಿದ ಸಾಮರ್ಥ್ಯದ ಆಧಾರದ ಮೇಲೆ ಮಾಡಲಾಗುತ್ತದೆ.

| ಕ್ರಮ ಸಂಖ್ಯೆ | ವಿವರಗಳು | ಗರಿಷ್ಠ ಅಂಕಗಳು | ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪಡೆಯಬೇಕಾದ ಕನಿಷ್ಠ ಅಂಕಗಳು |
|---|---|---|---|
| 1. | ಆಂಗ್ಲ ಭಾಷೆಯಲ್ಲಿ ಪ್ರಬಂಧ | 30 | 20 |
| 2. | ಕನ್ನಡದಿಂದ ಆಂಗ್ಲ ಭಾಷೆಗೆ ಅನುವಾದ | 30 | 20 |
| 3. | ಸಾಮಾನ್ಯ ಜ್ಞಾನ ಪರೀಕ್ಷೆ | 20 | 10 |
| 4. | ಮೌಖಿಕ ಪರೀಕ್ಷೆ | 20 | 10 |
| | ಒಟ್ಟು | 100 | 60 |

ಮುಂದುವರೆದಿದೆ..

7. ವಯೋಮಿತಿ: ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಸಲಾದ ಕೊನೆಯ ದಿನಾಂಕದಂದು ಕನಿಷ್ಟ 18 ವರ್ಷದವರಾಗಿರಬೇಕು ಮತ್ತು:

(ಎ) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೇ ಹಿಂದುಳಿದ ಜಾತಿಗಳ ಪ್ರವರ್ಗ–1ಕ್ಕೆ ಸೇರಿದ ಪಕ್ಷದಲ್ಲಿ ಅವರು ಗರಿಷ್ಠ 40 ವರ್ಷ ವಯಸ್ಸು ಮೀರಿರಬಾರದು.

(ಬಿ) ಇತರೇ ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಅಥವಾ '2ಬಿ' ಅಥವಾ '3ಎ' ಅಥವಾ '3ಬಿ'ಗೆ ಸೇರಿದ್ದಲ್ಲಿ ಗರಿಷ್ಠ 38 ವರ್ಷ ವಯಸ್ಸು ಮೀರಿರಬಾರದು; ಮತ್ತು

(ಸಿ) ಇತರೇ ಅಭ್ಯರ್ಥಿಗಳು 35 ವರ್ಷ ವಯಸ್ಸು ಮೀರಿರಬಾರದು.

(ಡಿ) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ 6ನೇ ನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ,

**(i)** ಅಭ್ಯರ್ಥಿಯು, ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಅಥವಾ ರಾಜ್ಯ ಅಥವಾ ಕೇಂದ್ರ ಅಧಿನಿಯಮದ ಅಡಿಯಲ್ಲಿ ಸರ್ಕಾರದ ಮೂಲಕ ಸ್ಥಾಪಿತವಾದ ಮತ್ತು ಸರ್ಕಾರದ ಅಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಸರ್ಕಾರೀ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಕ್ಷದಲ್ಲಿ ಅಥವಾ ಯಾವುದೇ ಹುದ್ದೆಯನ್ನು ಹೊಂದಿದ್ದಲ್ಲಿ ಹಾಗೆ ಸಲ್ಲಿಸಿರುವ ಅವಧಿ ಅಥವಾ 10 ವರ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿಯ ಸಡಿಲಿಕೆಗೆ ಅರ್ಹರಾಗಿರುತ್ತಾರೆ.

**(ii)** ಮಾಜಿ ಸೈನಿಕರಿಗೆ, ಕೇಂದ್ರ ಸಶಸ್ತ್ರ ಪಡೆಯಲ್ಲಿ ಅವರು ಸೇವೆ ಸಲ್ಲಿಸಿದ ಅವಧಿಯ ವರ್ಷಗಳ ಜೊತೆಗೆ ಮೂರು ವರ್ಷಗಳು ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

**(iii)** ಅಭ್ಯರ್ಥಿಯು ದೈಹಿಕ ಅಂಗವಿಕಲತೆ ಹೊಂದಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

**(iv)** ಅಭ್ಯರ್ಥಿಯು ವಿಧವೆಯಾಗಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

(ಇ) ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕವನ್ನು ಆಧರಿಸಿರುತ್ತದೆ.

ಮುಂದುವರೆದಿದೆ..

8. ಅರ್ಜಿ ಮತ್ತು ಶುಲ್ಕವನ್ನು ಸಲ್ಲಿಸುವ ವಿಧಾನ: ಅರ್ಜಿಯನ್ನು ಸಲ್ಲಿಸುವ ವಿಧಾನವು ವೆಬ್‌ಸೈಟ್‌ನ ಅನುಬಂಧದಲ್ಲಿ ಲಭ್ಯವಿರುವ ಮಾಹಿತಿಗಳಿಗೆ ಅನುಸಾರವಾಗಿ ಇರತಕ್ಕದ್ದು. ಈ ಮುಂದಿನ ವೆಬ್‌ಸೈಟ್‌ನ **http://karnatakajudiciary.kar.nic.in/recruitment.asp** ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆನ್‌ಲೈನ್ ಮೂಲಕವಲ್ಲದೆ ಇತರೆ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(ಎ) ಅಭ್ಯರ್ಥಿಗಳು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–I ಕ್ಕೆ ಸೇರಿದ ಮತ್ತು ದೈಹಿಕ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ) ಹುದ್ದೆಗೆ ಸಂಬಂಧಿಸಿದಂತೆ ನಿಗದಿಪಡಿಸಿದ 250/– ರೂ.ಗಳ (ಎರಡು ನೂರ ಐವತ್ತು ರೂ.ಗಳು ಮಾತ್ರ) ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–I ಕ್ಕೆ ಸೇರಿದ ಮತ್ತು ದೈಹಿಕ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು 100/– ರೂ.ಗಳ (ನೂರು ರೂ.ಗಳು ಮಾತ್ರ) ಅರ್ಜಿ ಶುಲ್ಕವನ್ನು, ಈ ಮುಂದಿನ ಯಾವುದೇ ವಿಧಾನಗಳ ಮೂಲಕ ಸಂದಾಯ/ ಪಾವತಿ ಮಾಡತಕ್ಕದ್ದು :

(i) ಆನ್‌ಲೈನ್ ಮೂಲಕ ಶುಲ್ಕ ಸಂದಾಯ: ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ, ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಗೆ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

ಅಥವಾ

(ii) ಚಲನ್ ನಮೂನೆಯಲ್ಲಿ ಶುಲ್ಕ ಸಂದಾಯ: ಅಭ್ಯರ್ಥಿಗಳು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಪಿ.ಡಿ.ಎಫ್ ನಮೂನೆಯಲ್ಲಿ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡತಕ್ಕದ್ದು. (ನೀವು ಉಪಯೋಗಿಸುವ ಕಂಪ್ಯೂಟರ್ ಪಿ.ಡಿ.ಎಫ್ ರೀಡರ್–ಅಡೋಬ್ ಅಕ್ರೋಬ್ಯಾಟ್ ಸಪೋರ್ಟ್ ಹೊಂದಿರತಕ್ಕದ್ದು)

ಮುಂದುವರೆದಿದೆ..

(ಬಿ) ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಹಿಂತಿರುಗಿಸಲಾಗುವುದಿಲ್ಲ.

**9** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ :

ಆನ್‌ಲೈನ್ ಮೂಲಕ ನೋಂದಣಿಗಾಗಿ ಮತ್ತು ಅರ್ಜಿಯನ್ನು ಸಲ್ಲಿಸುವುದಕ್ಕಾಗಿ **15.05.2017**

ಚಲನ್ ಮೂಲಕ ಶುಲ್ಕವನ್ನು ಸಂದಾಯ ಮಾಡುವುದಕ್ಕಾಗಿ **19.05.2017** (ಬ್ಯಾಂಕ್‌ಗಳ ಕೆಲಸದ ವೇಳೆಯಲ್ಲಿ)

**10.** ಮೀಸಲಾತಿ ಕೋರುವ ಅಭ್ಯರ್ಥಿಗಳು :

ಎ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ I/ II–ಎ/ II–ಬಿ/ III–ಎ/III–ಬಿ ಪ್ರವರ್ಗಗಳಡಿಯಲ್ಲಿಮೀಸಲಾತಿ ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರವು ನಿಗದಿಪಡಿಸಿದ ನಮೂನೆಯಲ್ಲಿ, ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

ಬಿ) ಗ್ರಾಮೀಣ/ಅಂಗವಿಕಲ/ಮಾಜಿ ಸೈನಿಕ/ ಕನ್ನಡ ಮಾಧ್ಯಮ/ ಯೋಜನಾ ನಿರಾಶ್ರಿತರು/ ವಿಧವೆ – ಕೋಟಾದಲ್ಲಿ ಮೀಸಲಾತಿಯನ್ನು ಕೋರಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

ಸಿ) ಮೇಲಿನ ಕ್ರಮಸಂಖ್ಯೆ 10 (ಎ) ಮತ್ತು (ಬಿ) ಅಡಿಯಲ್ಲಿ ಸೌಲಭ್ಯಗಳನ್ನು ಕೋರಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡುವ ಯುಕ್ತ ಪ್ರಮಾಣ ಪತ್ರಗಳನ್ನು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲು ಹೊಂದಿರತಕ್ಕದ್ದು.

ಡಿ) ಕೇಂದ್ರ ಸರ್ಕಾರ /ರಾಜ್ಯ ಸರ್ಕಾರ ಮತ್ತು ಅವುಗಳ ಅಧೀನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರವು ನೀಡಿರುವ "ನಿರಾಕ್ಷೇಪಣಾ ಪ್ರಮಾಣ ಪತ್ರ"ಗಳನ್ನು ಹೊಂದಿರತಕ್ಕದ್ದು. ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಮತ್ತು ನಂತರದ ಪರಿಶೀಲನೆಗಳ ಸಮಯದಲ್ಲಿ ಸದರಿ ಪ್ರಮಾಣ ಪತ್ರವನ್ನು ಹಾಜರುಪಡಿಸತಕ್ಕದ್ದು.

ಮುಂದುವರೆದಿದೆ..

ಇ) ಸ್ಥಳೀಯ ವೃಂದ (ಅನುಚ್ಛೇದ 371–ಜೆ ಅಡಿಯಲ್ಲಿನ ಹೈದರಾಬಾದ್–ಕರ್ನಾಟಕ ಪ್ರದೇಶ)ದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರಿ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶ– ಅರ್ಹತಾ ಪ್ರಮಾಣ ಪತ್ರಗಳು) ನಿಯಮಗಳು, 2013ರಡಿಯಲ್ಲಿ ಗೊತ್ತುಪಡಿಸಿದಂತೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಂದು ಅಥವಾ ಅದಕ್ಕೂ ಮುಂಚಿತವಾಗಿಯೇ ಸಕ್ಷಮ ಪ್ರಾಧಿಕಾರವು ನೀಡುವ ಯುಕ್ತ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

11. ದಾಖಲೆಗಳ ಪರಿಶೀಲನೆ/ಪರೀಕ್ಷೆಗೆ ಸಂಬಂಧಿಸಿದಂತೆ ಕರೆಯಲಾದ ಅಭ್ಯರ್ಥಿಗಳು ಪರಿಶೀಲನೆಗಾಗಿ ಶೈಕ್ಷಣಿಕ ವಿದ್ಯಾರ್ಹತೆ, ಜಾತಿ, ಹುಟ್ಟಿದ ದಿನಾಂಕಗಳಿಗೆ ಸಂಬಂಧಿಸಿದ ಅವಶ್ಯಕ ಮೂಲ ದಾಖಲೆಗಳನ್ನು ಮತ್ತು ಗ್ರಾಮೀಣ/ಅಂಗವಿಕಲ/ಮಾಜಿ ಸೈನಿಕ/ ಕನ್ನಡ ಮಾಧ್ಯಮ/ ಯೋಜನಾ ನಿರಾಶ್ರಿತರು /ವಿಧವೆ ಮತ್ತು ಸ್ಥಳೀಯ ವೃಂದಕ್ಕಾಗಿ ಮೀಸಲಾತಿಯನ್ನು ಕೋರುವವರು ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು. ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ ಆತನ/ ಆಕೆಯ ಅಭ್ಯರ್ಥಿಕೆಯು ರದ್ದಾಗುತ್ತದೆ ಮತ್ತು ಅವರ ವಿರುದ್ಧ ತಪ್ಪು ಮಾಹಿತಿಯನ್ನು ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ವ್ಯವಹರಣೆಯನ್ನು ಜರುಗಿಸಲಾಗುವುದು.

12. ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಮೂರು ನಡತೆ ಪ್ರಮಾಣ ಪತ್ರಗಳನ್ನು (ಒಂದು ನಡತೆ ಪ್ರಮಾಣ ಪತ್ರವನ್ನು ಅಂತಿಮವಾಗಿ ವ್ಯಾಸಂಗ ಮಾಡಿದ ಶಿಕ್ಷಣ ಸಂಸ್ಥೆಯಿಂದಲೂ, ಇನ್ನೆರಡು ನಡತೆ ಪ್ರಮಾಣ ಪತ್ರಗಳನ್ನು ಗೌರವಾನ್ವಿತ ವ್ಯಕ್ತಿಗಳಿಂದಲೂ ಪಡೆದು) ಹಾಜರುಪಡಿಸತಕ್ಕದ್ದು.

13. ಲಿಖಿತ ಪರೀಕ್ಷೆ ಮತ್ತು ಮೌಖಿಕ ಪರೀಕ್ಷೆಗೆ ಕರೆಯಲಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

ಮುಂದುವರೆದಿದೆ..

14. ದ್ವಿತೀಯ ದರ್ಜೆ ಗುಮಾಸ್ತ ಹುದ್ದೆಗೆ ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು ಬೆಂಗಳೂರಿನಲ್ಲಿನ ಪ್ರಧಾನ ಪೀಠದಲ್ಲಾಗಲೀ ಅಥವಾ ಧಾರವಾಡ ಅಥವಾ ಗುಲ್ಬರ್ಗಾಗಳಲ್ಲಿನ ಪೀಠಗಳಲ್ಲಾಗಲೀ ನಿಯೋಜಿಸಬಹುದು.

15. ಅಭ್ಯರ್ಥಿಗಳು ಅಭ್ಯರ್ಥಿಕೆಯ ಸಂಬಂಧದಲ್ಲಿ ಸಿಬ್ಬಂದಿ ಅಥವಾ ಸಿಬ್ಬಂದಿಯೇತರ ಮೂಲಗಳ ಮೂಲಕ ಯಾವುದೇ ರೀತಿಯ ಬಾಹ್ಯ ಬೆಂಬಲವನ್ನು ಪಡೆಯುವ ಪ್ರಯತ್ನ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು.

ಮಾನ್ಯ ಮುಖ್ಯನ್ಯಾಯಮೂರ್ತಿಗಳ ಆದೇಶಾನುಸಾರ,

ಸಹಿ/–
(ಬಿ. ಜಯಂತ ಕುಮಾರ)
ವಿಲೇಖನಾಧಿಕಾರಿ (ನೇಮಕಾತಿ)